

5ನೇ ಪುಟದಿಂದ

ಕಾರ್ಯಕ್ರಮಗಳನ್ನು ನೀಡಿದ ಈ ವಿಕಲಾಂಗರು ಭರತನಾಟ್ಯ ಅಲ್ಲದೆ ಸೂಫಿ ನೃತ್ಯದಲ್ಲೂ ಪರಿಣತರು. ಕಳೆದ 25 ವರ್ಷಗಳಿಂದ ತಮ್ಮ ಕಲಾ ಜೀವನವನ್ನು ವಿಕಲಚೇತನರಿಗೆ ಮುಡಿಪಾಗಿಟ್ಟ ನೃತ್ಯಗುರು ಪಾಶ ಅವರು ನೃತ್ಯವನ್ನು ಗಾಲಿ ಕುರ್ಚಿ ಮೇಲೆ ಕುಳಿತು ಮಾಡಲು ಆರಂಭಿಸಿದ್ದು ಕೂಡ ರೋಚಕವಾದದ್ದು.

ತಮ್ಮ ಬದುಕಿನ ಇತಿಹಾಸವನ್ನು ಮೆಲುಕು ಹಾಕುವ ಗುರು ಪಾಶ ಅವರು, 'ನಾನು ಏಳು ವರ್ಷದ ಬಾಲಕನಿರುವಾಗ ಸ್ನೇಹಿತನ ಮದುವೆ ಸಮಾರಂಭಕ್ಕೆ ಹೋಗಿದ್ದೆ. ಅಲ್ಲಿ ಕೊಠಡಿಯೊಂದರಿಂದ ಕಿರುಚುವ ದನಿ ಕೇಳಿಸಿತು. ಕಿಟಕಿಯಿಂದ ಇಣುಕಿ ನೋಡಿದರೆ ಒಬ್ಬ ಕಾಲಿಲ್ಲದ ಹುಡುಗನನ್ನು ಹಗ್ಗದಿಂದ ಕುರ್ಚಿಗೆ ಕಟ್ಟಿ ಹಾಕಿದ್ದರು. ಆತನ ಯಾತನೆ ನೋಡಲಾರದೆ ಕಣ್ಣಲ್ಲಿ ನೀರು ಬಂತು. ಇದೇ ಘಟನೆ ನನ್ನನ್ನು ಅಂಗವಿಕಲರಿಗೆ ಏನನ್ನಾದರೂ ಮಾಡಬೇಕು ಎಂಬಂತೆ ಪ್ರೇರೇಪಿಸಿತು' ಎನ್ನುತ್ತಾರೆ.

ನೃತ್ಯಪಟು ನರ್ಮದಾ ಮತ್ತು ಕಥಕ್ ಖ್ಯಾತಿಯ ಮಾಯಾರಾವ್ ಅವರಿಂದ ನೃತ್ಯ ಮತ್ತು ವೇದ, ರಾಮಾಯಣ, ಮಹಾಭಾರತ, ಭಗವದ್ಗೀತೆ, ಮಂತ್ರ ಪಠಣ, ಶ್ಲೋಕಗಳನ್ನು ಗುರು ಅಷ್ಟಾಕ್ಷರಂ ಅಯ್ಯಂಗಾರರಲ್ಲಿ ಕಲಿತು ದೆಹಲಿಯಲ್ಲಿ ವಿಕಲಾಂಗರಿಗಾಗಿಯೇ 'ಎಬಿಲಿಟಿ ಅನ್‌ಲಿಮಿಟೆಡ್ ಫೌಂಡೇಶನ್' ಸ್ಥಾಪಿಸಿದ್ದು, ಲಿಮ್ಕಾ ವಿಶ್ವದಾಖಲೆ ಪುಸ್ತಕದಲ್ಲಿ ದಾಖಲೆ ನಿರ್ಮಿಸಿರುವುದು ಅವರ ಅಗ್ಗಳಿಕೆ.

ಗುರು ಪಾಶ ಮೂಲತಃ ಬೆಂಗಳೂರಿನ ಆನೇಕಲ್‌ನವರು. ನೃತ್ಯಪಟು ನರ್ಮದಾ ಮತ್ತು ಕಥಕ್ ಖ್ಯಾತಿಯ ಮಾಯಾರಾವ್ ಅವರಿಂದ ನೃತ್ಯ ಕಲಿತು ಕಳೆದ 25 ವರ್ಷಗಳಿಂದ ಅಂಗವಿಕಲರಿಗಾಗಿ ನೃತ್ಯ ಕಲಿಸುತ್ತಿರುವ ನೃತ್ಯಗುರು. 20 ವರ್ಷಗಳ ಕಾಲ ಅನ್ವೇಷಣೆ ನಡೆಸಿ ನೃತ್ಯ-ಸಂಗೀತವನ್ನು ಚಿಕಿತ್ಸೆಯ ರೂಪದಲ್ಲಿ ನೀಡುತ್ತಿರುವ ಅಪರೂಪದ ಕಲಾವಿದ.

### ಅಭ್ಯಾಸ ಹೇಗೆ?

ನೃತ್ಯದ ಪ್ರತಿಯೊಂದು ಅಡವು, ಮುದ್ರೆ, ಜತಿಗಳನ್ನೂ ಅಭಿವ್ಯಕ್ತಿಸುವುದು ನಾಟ್ಯದ ವೈಶಿಷ್ಟ್ಯ. ಇವಿಷ್ಟನ್ನೂ ಗಾಲಿ ಕುರ್ಚಿ ಮೇಲೆ ಕುಳಿತು ಪ್ರದರ್ಶಿಸುವುದು ಸುಲಭದ ಮಾತಂತೂ ಖಂಡಿತ ಅಲ್ಲ. ಇವರಿಗಾಗಿಯೇ ಎರಡು ದೊಡ್ಡ ಮತ್ತು ಎರಡು ಚಿಕ್ಕ ಗಾಲಿಗಳಿರುವ ಗಾಲಿ ಕುರ್ಚಿ ತಯಾರಿಸಿ ನೃತ್ಯ ಅಭ್ಯಾಸ ಮಾಡಿಸಿದೆ. ಅಡವುಗಳಿಗೆ ಚಿಕ್ಕ ಗಾಲಿಗಳು, ಹೆಜ್ಜೆಗಳಿಗೆ ದೊಡ್ಡ ಗಾಲಿ ಬಳಸಲಾಗುತ್ತದೆ. ಒಂದು ಕಾರ್ಯಕ್ರಮ ನೀಡಬೇಕು ಎಂದಾದರೆ ಬಹಳ ರಿಹರ್ಸಲ್ ಬೇಕಾಗುತ್ತದೆ. ನಾಟ್ಯದಲ್ಲಿ ದಶದಿಕ್ಪಾಲಕ ಸ್ತುತಿ, ವರ್ಣ, ತಿಲ್ಲಾನ ಎಲ್ಲದರ ಜತೆಗೆ ಸೂಫಿ ಭಜನ್‌ಗಳನ್ನು ಪ್ರಸ್ತುತಪಡಿಸುವುದು ತುಂಬಾ ಕಷ್ಟ.

'ಇದಕ್ಕಾಗಿ ನಾನು ಅಂಗವಿಕಲ ಅಲ್ಲದಿದ್ದರೂ ಗಾಲಿ ಕುರ್ಚಿಗೆ ಕಾಲುಗಳನ್ನು ಕಟ್ಟಿಹಾಕಿ ದಿನಕ್ಕೆ 8-10 ಗಂಟೆಗಳ ಕಾಲ ಅಭ್ಯಾಸ ಮಾಡಿದೆ. ನೃತ್ಯದಲ್ಲಿ ಹೊಸ ಸಂಶೋಧನೆ ಮಾಡಿ ನೃತ್ಯ-ಸಂಗೀತ ಚಿಕಿತ್ಸೆ ನೀಡಿ ಯಶಸ್ವಿಯಾದದ್ದೇ ಅಲ್ಲದೆ ರಾಷ್ಟ್ರಪತಿಗಳಿಂದ ಪುರಸ್ಕಾರವನ್ನೂ ಪಡೆದೆ' ಎಂದು ಅವರು ಹೇಳುತ್ತಾರೆ.

ಮುಂದಿನ ತಿಂಗಳು ಈ ಕಲಾವಿದರ ತಂಡ ಕಾರ್ಯಕ್ರಮ ನೀಡುವುದಕ್ಕಾಗಿ ಇಟಲಿ ಪ್ರವಾಸ ಕೈಗೊಳ್ಳಲಿದೆ. ಭಾರತೀಯ ಕಲೆ, ಸಂಸ್ಕೃತಿಯ ಕಂಪು ವಿದೇಶಿ ನೆಲದಲ್ಲಿ ಹರಡಲಿದೆ. ಈ ಎಲ್ಲ ಕಲಾವಿದರಿಗೆ ಆಲ್ ದಿ ಬೆಸ್ಟ್..!